ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 07–09–2021

# ಮಾಧ್ಯಮ ಆಹ್ವಾನ
# MEDIA INVITATION

## ಸೆಪ್ಟೆಂಬರ್ 13 ರಿಂದ ಪ್ರಾರಂಭವಾಗಲಿರುವ ಅಧಿವೇಶನ ಕುರಿತು ಪತ್ರಿಕಾಗೋಷ್ಠಿ

**ವಿಶ್ವೇಶ್ವರ ಹೆಗಡೆ ಕಾಗೇರಿ,**
**ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ.**

**ದಿನಾಂಕ: 08–09–2021, ಬುಧವಾರ,**
**ಸಮಯ: ಬೆಳಿಗ್ಗೆ 11–30 ಗಂಟೆಗೆ,**
**ಸ್ಥಳ: ಕೊಠಡಿ ಸಂಖ್ಯೆ 106, ಮೊದಲನೇ ಮಹಡಿ, ವಿಧಾನಸೌಧ, ಬೆಂಗಳೂರು.**

# ಪತ್ರಿಕಾ ಪ್ರಕಟಣೆ
**PRESS RELEASE**

## ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು ಹುದ್ದೆಗಳ
## ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ

ಬೆಂಗಳೂರು, ಸೆಪ್ಟೆಂಬರ್ 07, (ಕರ್ನಾಟಕ ವಾರ್ತೆ) :

ಕರ್ನಾಟಕ ಲೋಕ ಸೇವಾ ಆಯೋಗವು ದಿನಾಂಕ: 14–05–2020ರ ಅಧಿಸೂಚನೆಗಳನ್ವಯ ರಾಜ್ಯದ ಇಲಾಖೆಗಳಲ್ಲಿ ಖಾಲಿ ಇರುವ 2019–20ನೇ ಸಾಲಿನ ಕಿರಿಯ ಸಹಾಯಕರ / ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಅಧಿಸೂಚಿಸಲಾಗಿದ್ದು, ನೇಮಕಾತಿಗೆ ಸಂಬಂಧಿಸಿದಂತೆ ಸೆಪ್ಟೆಂಬರ್ 18 ರಂದು ಕಡ್ಡಾಯ ಭಾಷಾ ಪರೀಕ್ಷೆಯನ್ನು ಮತ್ತು ಸೆಪ್ಟೆಂಬರ್ 19 ರಂದು ಎರಡು ಅಧಿವೇಶನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ನಿಗದಿಪಡಿಸಲಾಗಿದೆ.

ಅಭ್ಯರ್ಥಿಗಳು ದಿನಾಂಕ: 11–02–2021 ರಲ್ಲಿ ತನ್ನ ಸ್ವತಃ ಲಿಪಿಕಾರರ ಸೇವೆಯನ್ನು ಒದಗಿಸುವಂತೆ ಆಯೋಗವನ್ನು ಕೋರಲು ಅವಕಾಶವಿರಬೇಕೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೃಷ್ಟಿಮಾಂದ್ಯತೆ, ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು ಅಂಗವಿಕಲತೆಗಳನ್ನು ಮತ್ತು ಇತರೆ ವರ್ಗಗಳ ಎದ್ದು ಕಾಣುವ ಅಂಗವಿಕಲತೆಯನ್ನು (Blindness, Loco-motor disability, Cerebral palsy and other categories of Benchmark Disabilities) ಹೊಂದಿರುವ ಅಭ್ಯರ್ಥಿಗಳು ಆಯೋಗದ ಅಂತರ್ಜಾಲ http://kpsc.kar.nic.in ನಲ್ಲಿ ದಿನಾಂಕ: 06–09–2021 ರಿಂದ ಲಿಪಿಕಾರರ ಸೇವೆಯನ್ನು ಕೋರುವ ಅವಕಾಶವನ್ನು ಕಲ್ಪಿಸಲಾಗಿದೆ.

ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 18-09-2021 ಮತ್ತು 19-09-2021 ರಂದು ನಡೆಸುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಆಯೋಗದ ವೆಬ್‌ಸೈಟ್ http://kpsc.kar.nic.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಾಗ ತಾಂತ್ರಿಕ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ ಸಂಖ್ಯೆ: 18002728707 ನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Photo Caption:

**1.** ಮೈಸೂರಿಗೆ ಭೇಟಿ ನೀಡಿರುವ ಗ್ವಾರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಇಂದು ಚಾಂಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ತಾಯಿ ಚಾಮುಂಡೇಶ್ವರಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು . ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಬಗಾದಿ ಗೌತಮ್ ಸೇರಿದಂತೆ ಮುಂತಾದ ಗಣ್ಯರು ಉಪಸ್ಥಿತರಿದ್ದರು.

Shri Thaawarchand Gehlot, Hon'ble Governor of Karnataka visited Chamundeshwari temple a top Chamundi Hill this morning and offered special prayers to deity. Dr. Bagadi Gautham,I.A.S , Deputy Commissioner of Mysuru and other officials were also present

2. Karnataka Chief Minister Mr. Basavaraj S. Bommai called on the Union Minister for Finance Mrs Nirmala Sitharaman in New Delhi on September-07.The Chief Secretary GOK Mr P Ravikumar, Principal secretary to the Chief Minister Mr Manjunath Prasad and Revenue Secretary,GOI Mr Tarun Bajaj were present.

## ಗೌರಿ ಗಣೇಶ ಹಬ್ಬದ ಪ್ರಯುಕ್ತ ಕೆಎಸ್‌ಆರ್‌ಟಿಸಿ ನಿಗಮದಿಂದ 1000 ಹೆಚ್ಚುವರಿ ಬಸ್ಸುಗಳ ವಿಶೇಷ ಸಾರಿಗೆ ವ್ಯವಸ್ಥೆ

ಬೆಂಗಳೂರು, ಸೆಪ್ಟೆಂಬರ್ 07, (ಕರ್ನಾಟಕ ವಾರ್ತೆ) :

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಗೌರಿ ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸೆಪ್ಟೆಂಬರ್ 08 ಹಾಗೂ ಸೆಪ್ಟೆಂಬರ್ 09 ರಂದು ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ 1000 ಹೆಚ್ಚುವರಿ ವಾಹನಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಲಾಗಿದೆ. ನಂತರ ರಾಜ್ಯದ ಮತ್ತು ಅಂತರರಾಜ್ಯದ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ಸೆಪ್ಟೆಂಬರ್ 12, 2021ರಂದು ವಿಶೇಷ ವಾಹನಗಳ ಸೇವೆಯನ್ನು ಕಲ್ಪಿಸಲಾಗುವುದು.

- ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗೀರ್, ಬೀದರ್, ತಿರುಪತಿ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ.
- ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮಾರ್ಗದ ಕಡೆ ಕಾರ್ಯಾಚರಣೆ.
- ತಮಿಳುನಾಡು ಮತ್ತು ಆಂಧ್ರಪ್ರದೇಶ/ತೆಲಂಗಾಣ ಕಡೆಗೆ ಅಂದರೆ ಮಧುರೈ, ಕುಂಭಕೋಣಂ, ತಿರುಚಿ, ಚೆನ್ನೈ, ಕೊಯಮತ್ತೂರ್ ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ಹೋಗುವ ಪ್ರತಿಷ್ಠಿತ ಸಾರಿಗೆಗಳನ್ನು ಶಾಂತಿನಗರದಲ್ಲಿನ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡಲಾಗುವುದು.

ಇ-ಟಿಕೇಟ್ ಬುಕಿಂಗ್‌ನ್ನು ksrtc.karnataka.gov.in ವೆಬ್ ಸೈಟ್ ಮುಖಾಂತರ ಮಾಡಬಹುದಾಗಿದ್ದು, **ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಸಾರಿಗೆಗಳಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಪ್ರಯಾಣಿಕರು ಬಸ್ ನಿಲ್ದಾಣಗಳಿಗೆ ತೆರಳುವ ಮುನ್ನ ಮುಂಗಡ ಕಾಯ್ದಿರಿಸಲಾಗಿರುವ ಟಿಕೇಟುಗಳ ಮೇಲೆ ನಮೂದಿಸಲಾಗಿರುವ ಬಸ್ ನಿಲ್ದಾಣ/ಪಿಕ್‌ಅಪ್ ಪಾಯಿಂಟ್‌ನ ಹೆಸರನ್ನು ಗಮನಿಸುವುದು..**

ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೇಟು ಕಾಯ್ದಿರಿಸಿದಲ್ಲಿ **ಶೇಕಡ 5** ರಷ್ಟು ರಿಯಾಯಿತಿ ನೀಡಲಾಗುವುದು ಹಾಗೂ ಹೋಗುವ & ಬರುವ ಪ್ರಯಾಣದ ಟಿಕೇಟ್‌ನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ **ಶೇಕಡ 10** ರಷ್ಟು ರಿಯಾಯಿತಿ ನೀಡಲಾಗುವುದು.

ನೆರೆ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ಗೋವಾ, ಮಹಾರಾಷ್ಟ್ರ ಹಾಗೂ ಪುದುಚೆರಿ ಮುಂತಾದ ಪ್ರಮುಖ ನಗರಗಳಲ್ಲಿ ನಿಗಮದ ಮುಂಗಡ ಆಸನಗಳನ್ನು ಕಾಯ್ದಿರಿಸುವ ಕೌಂಟರ್‌ಗಳು ಇದ್ದು, ಇವುಗಳ ಮೂಲಕ ಸಹ ಮುಂಗಡವಾಗಿ ಆಸನಗಳನ್ನು ನಿಗಮದ ಸಾರಿಗೆಗಳಿಗೆ ಕಾಯ್ದಿರಿಸಬಹುದಾಗಿದೆ.

ಕಾರ್ಯಾಚರಣೆ ಮಾಡಲಾಗುವ ಹೆಚ್ಚುವರಿ ಸಾರಿಗೆಗಳು, ಅವುಗಳು ಹೊರಡುವ ಸ್ಥಳ ಹಾಗೂ ವೇಳಾ ವಿವರಗಳನ್ನು ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅಂತರ್‌ಜಾಲ ವ್ಯವಸ್ಥೆಯಲ್ಲಿ ಹಾಗೂ ಕರಾರಸಾ ನಿಗಮದ ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ಮಾಹಿತಿಗಾಗಿ ಒದಗಿಸಲಾಗಿದೆ. ಹೆಚ್ಚುವರಿ ಸಾರಿಗೆಗಳಲ್ಲಿ ಸಂಚರಿಸುವ ಪ್ರಯಾಣಿಕರು ಕಾಯ್ದಿರಿಸುವ ಮುಂಗಡ ಚೀಟಿಗಳಲ್ಲೂ ಕೂಡ ವಾಹನ ಹೊರಡುವ ಸ್ಥಳದ ವಿವರ ನಮೂದಿಸಲಾಗಿದೆ.**ಅಲ್ಲದೇ, ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿನ ಎಲ್ಲಾ ತಾಲ್ಲೂಕು/ಜಿಲ್ಲಾ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕನುಗುಣವಾಗಿ ವಿಶೇಷ ಸಾರಿಗೆಗಳ ಕಾರ್ಯಾಚರಣೆ ಮಾಡಲಾಗುವುದು.**

**ಕೋವಿಡ್–19 ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಸಾರ್ವಜನಿಕ ಪ್ರಯಾಣಿಕರು ಪಾಲನೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ನಿಗಮದ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## Transport arrangements of 1000 additional buses by KSRTC during Gowri- Ganesha Festival

Bengaluru, September 07 (Karnataka Information):

In view of Gowri-Ganesha Festival, KSRTC has made elaborate arrangements for operating 1000 extra buses as mentioned below in addition to the existing schedules to provide transport facility to the traveling public on 08.09.2021 to 09.09.2021. Later, special buses will be operated from various places of Intra & Interstate places to Bengaluru on 12.09.2021.

- Special buses will be exclusively operated from Bengaluru Kempegowda Bus Station to Dharmastala, Kukkesubramanya, Shivamogga, Hassan, Mangaluru, Kundapura, Sringeri, Horanadu, Davangere, Hubballi, Dharwad, Belagavi, Vijayapura, Gokarna, Sirsi, Karwar, Raichur, Kalaburagi, Ballari, Koppala, Yadgir, Bidar, Tirupathi and other places.
- Special buses from Mysuru Road Bus Station will be exclusively operated towards Mysuru, Hunsur, Piriyapatna, Virajpet, Kushalanagar, Madikeri.
- All premier special buses will be operated from BMTC, Bus station Shanthinagar(TTMC) to Madurai, Kumbakonam, Trichy, Chennai, Coimbatore, Tirupathi, Vijayawada, Hyderabad and other places in Tamil Nadu and Andhra Pradesh/Telangana state.
- **Facility is provided to book computerized reservation tickets in advance for the special buses.**
- **Reserved passengers are requested to note the place of boarding in their reservation ticket.**
- Passengers can book tickets online by logging on to ksrtc.karnataka.gov.in
- Advance reservation of tickets for the special and scheduled buses of KSRTC can be booked through 685 counters in Karnataka & other States.
- A discount of **5%** on the fare will be extended, if four or more passenger’s book tickets in a single ticket and a discount of **10%** is offered on the return journey ticket if onward and downward journey tickets are booked simultaneously.
- Advance Reservation tickets for the services of KSRTC can be booked through the booking counters established by KSRTC at important cities of neighbouring States i.e. Tamilnadu, Andhra Pradesh, Telangana, Kerala, Puducherry, Maharashtra and Goa State.

- The details of the special operations like place and timings of departure have been provided in the computerized advance reservation network and also in the advance reservation tickets KSRTC website for the information of the traveling public.
- In addition to the above, special buses will be operated from all Taluk/District Bus Stands in the jurisdiction of KSRTC based on the traffic needs.
- Travelling passengers has to follow the guidelines issued by Government of Karnataka Covid-19.

## ಕರ್ನಾಟಕ ರಾಜ್ಯ ಸಫಾಯಿ ಕರ್ಮ ಚಾರಿ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿ ಸ್ಥಳಾಂತರ

ಬೆಂಗಳೂರು, ಸೆಪ್ಟೆಂಬರ್ 07(ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಸಫಾಯಿ ಕರ್ಮ ಚಾರಿ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯನ್ನು ಸೆಪ್ಟೆಂಬರ್ 03,2021 ರಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮ ಚಾರಿ ಅಭಿವೃದ್ಧಿ ನಿಗಮ, ಪ್ರಧಾನ ಕಚೇರಿ, ಸೈರಾ ಬಾಗ್, ನಂ -19/4, 3ನೇ ಮಹಡಿ, ಕನ್ನಿಂಗ್ ಹ್ಯಾಮ್ ರೋಡ್, ಬೆಂಗಳೂರು-52 ವಿಳಾಸಕ್ಕೆ ಸ್ಥಳಾಂತರಿಸಲಾಗಿದ್ದು, ಇನ್ನು ಮುಂದೆ ಕಚೇರಿ ಪತ್ರವ್ಯವಹಾರವನ್ನು ಈ ವಿಳಾಸದ ಮೂಲಕ ನಡೆಸಲು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸಪಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೌಖಿಕ ಸಂದರ್ಶನದ ಅಭ್ಯರ್ಥಿಗಳ ಅರ್ಹತಾ ಪಟ್ಟಿ ಪ್ರಕಟ

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ):

ಕರ್ನಾಟಕ ಲೋಕ ಸೇವಾ ಆಯೋಗವು 2020 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಕನ್ನಡ ಭಾಷಾ ವಿಷಯದ ಮೌಖಿಕ ಸಂದರ್ಶನಕ್ಕೆ ಅರ್ಹರಾಗಿರುವ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಆಯೋಗದ ವೆಬ್ ಸೈಟ್ http://kpsc.kar.nic.inನಲ್ಲಿ ಪ್ರಕಟಿಸಿದೆ.

ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಸೆಪ್ಟೆಂಬರ್ 15, 2021 ಮತ್ತು ಸೆಪ್ಟೆಂಬರ್ 16, 2021ರಂದು ಕಲುಬುರ್ಗಿ ಕೇಂದ್ರದಲ್ಲಿ ಹಾಗೂ ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಶಿವಮೊಗ್ಗ ಕೇಂದ್ರಗಳಲ್ಲಿ ಸೆಪ್ಟೆಂಬರ್ 16, 2021ರಂದು ನಡೆಸಲಿದೆ. ಮೌಖಿಕ ಸಂದರ್ಶನ ನಡೆಸಲಾಗುವ ದಿನಾಂಕ, ಸಮಯ ಮತ್ತು ಸ್ಥಳವನ್ನು ಆಯೋಗದ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಮೌಖಿಕ ಸಂದರ್ಶನದ ಸೂಚನಾ ಪತ್ರವನ್ನು ಸೆಪ್ಟೆಂಬರ್ 08, 2021 ರಿಂದ ಕರ್ನಾಟಕ ಲೋಕಸೇವ ಆಯೋಗದ ವೆಬ್ ಸೈಟ್ "http://kpsc.kar.nic.in"ನ ಹೋಂ ಪೇಜ್ ನಲ್ಲಿ Department also Examination 2020-II Session ಮೇಲೆ ಕ್ಲಿಕ್ ಮಾಡಿ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಹಾಗೆಯೇ Verify button ಅನ್ನು ಕ್ಲಿಕ್ ಮಾಡಿದ ನಂತರ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಅದರಲ್ಲಿ ನಮೂದಾಗುವ ಓ.ಟಿ.ಪಿ ಸಂಖ್ಯೆಯನ್ನು ನಮೂದಿಸಬೇಕು. ನಂತರ ಪುನಃ Verify ಓ.ಟಿ.ಪಿ ಬಟನ್ ಅನ್ನು ಕ್ಲಿಕ್ ಮಾಡಬೇಕು. ತದನಂತರ ಡೌನ್ ಲೋಡ್ ಬಟನ್ ಅನ್ನು ಕ್ಲಿಕ್ ಮಾಡಿ ಸೂಚನಾ ಪತ್ರ ವನ್ನು ಮುದ್ರಿಸಿ ಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಿವಿಲ್ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ ಲಿಖಿತ ಪರೀಕ್ಷೆಗೆ ತರಬೇತಿ

ಬೆಂಗಳೂರು, ಸೆಪ್ಟೆಂಬರ್ 07, (ಕರ್ನಾಟಕ ವಾರ್ತೆ) :

ಕರ್ನಾಟಕ ಸರ್ಕಾರವು ಮುಂದಿನ ದಿನಗಳಲ್ಲಿ ನಡೆಸಲಿರುವ ಪೊಲೀಸ್ ಇಲಾಖೆಯಲ್ಲಿನ ಸಾವಿರಕ್ಕೂ ಹೆಚ್ಚು ಸಿವಿಲ್ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ ಲಿಖಿತ ಪರೀಕ್ಷೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 'ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'ದ ವತಿಯಿಂದ ತರಬೇತಿ ನೀಡಲು ನಿರ್ಧರಿಸಲಾಗಿದೆ.

ಆಸಕ್ತರು ದಿನಾಂಕ: 14.09.2021 ರೊಳಗಾಗಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ **'ಮುಕ್ತಗಂಗೋತ್ರಿ'** ಆವರಣದಲ್ಲಿರುವ **'ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ'**ದ ಕಛೇರಿಯಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯೊಳಗಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬಹುದೆಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಆರ್. ರಾಜಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ: 0821–2515944 / 9964760090 ನ್ನು ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಜಲ ಮಂಡಳಿಯ ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್

ಬೆಂಗಳೂರು, ಸೆಪ್ಟೆಂಬರ್ 7 (ಕರ್ನಾಟಕ ವಾರ್ತೆ):

ಬೆಂಗಳೂರು ಜಲಮಂಡಳಿಯ ವತಿಯಿಂದ ದಿನಾಂಕ:09.09.2021 ಗುರುವಾರ ದಂದು **(ಪೂರ್ವ)–2–3, (ಪೂರ್ವ)–1–2, (ದಕ್ಷಿಣ–2), (ಆಗ್ನೇಯ–4), (ಪಶ್ಚಿಮ–2), (ನೈರುತ್ಯ–2), (ಆಗ್ನೇಯ–2), (ವಾಯುವ್ಯ–3), (ಕೇಂದ್ರ–2), (ಉತ್ತರ–2), (ಈಶಾನ್ಯ–1) ಮತ್ತು (ಉತ್ತರ ವಿಲೇಜ್–1)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಬೆಳಿಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ಸೇವಾಠಾಣೆಗಳು** | **ದೂರವಾಣಿ ಸಂಖ್ಯೆ** |
|---|---|---|---|
| **(ಪೂರ್ವ)–2–3** | 1ನೇ ಮುಖ್ಯ ರಸ್ತೆ, ಕಸ್ತೂರಿನಗರ, ಬೆಂಗಳೂರು–43. | ಬಾಣಸವಾಡಿ, ಓ.ಎಂ.ಬಿ.ಆರ್,ಲಿಂಗರಾಜಪುರಂ, ಕಸ್ತೂರಿನಗರ | 9845444058 |
| **(ಪೂರ್ವ)–1–2** | ಎ. ನಾರಾಯಣಪುರ ಮುಖ್ಯ ರಸ್ತೆ, ಕೆ.ಆರ್.ಪುರಂ ರೈಲ್ವೇ ನಿಲ್ದಾಣದ ಎದುರು, ಪಟಾಲಮ್ಮ ದೇವಸ್ಥಾನದ ಹತ್ತಿರ, ಹನುಮಾನ್ ಜಂಕ್ಷನ್, ಎ.ನಾರಾಯಣಪುರ, ಬೆಂಗಳೂರು–16 | ಎ.ನಾರಾಯಣಪುರ, ದೊಡ್ಡನಕುಂದಿ, ವಿಜ್ಞಾನ ನಗರ, | 9740984162 |
| **(ದಕ್ಷಿಣ–2)** | ವಾಟರ್ ಟ್ಯಾಂಕ್ ಹತ್ತಿರ, 100 ಅಡಿ ರಸ್ತೆ, ಬಿ.ಟಿ.ಎಂ 2ನೇ ಹಂತ, ಬೆಂಗಳೂರು–76 | ಹೆಚ್.ಎಸ್.ಆರ್–1, ಕೋಡಿಚಿಕ್ಕನಹಳ್ಳಿ, ಬೊಮ್ಮನಹಳ್ಳಿ | 40977432 |
| **( ಆಗ್ನೇಯ–4)** | 2ನೇ ಅಡ್ಡರಸ್ತೆ, 17ನೇ ಮುಖ್ಯರಸ್ತೆ, ಕೋರಮಂಗಲ 3ನೇ ಬ್ಲಾಕ್, ಬೆಂಗಳೂರು–34 | ಕೋರಮಂಗಲ–1&2, ಬೆಳ್ಳಂದೂರು | 9591988970 |
| **(ಪಶ್ಚಿಮ–2)** | 5ನೇ ಹಂತ, 1ನೇ ಮುಖ್ಯರಸ್ತೆ, ಬಿ.ಇ.ಎಂ.ಎಲ್. ಲೇಔಟ್, | ಕೆಂಗೇರಿ, ಐಡಿಯಲ್ ಹೋಮ್ಸ್, ಬಿ.ಇ.ಎಂ.ಎಲ್ ಲೇಔಟ್, | 28611826 |

| | | | |
|---|---|---|---|
| | ರಾಜರಾಜೇಶ್ವರಿ ನಗರ,ಬೆಂಗಳೂರು–98 | ಆರ್.ಆರ್.ನಗರ | |
| **(ನೈರುತ್ಯ–2)** | ನೆಲಮಹಡಿ, 1ನೇ ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ, ಬನಗಿರಿನಗರ, ಬೆಂಗಳೂರು.–85 | ಕತ್ರಿಗುಪ್ಪೆ, ಹೊಸಕೆರೆಹಳ್ಳಿ, ದೇವಗಿರಿ–1, ಇಟ್ಟಮಡು, ಬನಗಿರಿನಗರ | 9845444113 |
| **(ಆಗ್ನೇಯ–2)** | 10ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಇಂದಿರಾನಗರ ಕ್ಲಬ್ ಹಿಂಭಾಗ, ಹೆಚ್.ಎ.ಎಲ್ 2ನೇ ಹಂತ, ಬೆಂಗಳೂರು. | ಜೀವನ್ ಭೀಮಾನಗರ, ಹೆಚ್.ಎ.ಎಲ್ 2ನೇ ಹಂತ, ಇಂದಿರಾನಗರ, ಬೈಯ್ಯಪ್ಪನಹಳ್ಳಿ, ಸಿ.ವಿ.ರಾಮನ್‌ನಗರ, ಸದಾನಂದನಗರ | 9845444070 |
| **(ವಾಯುವ್ಯ–3)** | 5ನೇ ಬ್ಲಾಕ್, ಹೊರವರ್ತುಲ ರಸ್ತೆ, ನಾಗರಬಾವಿ, ಬೆಂಗಳೂರು. | ನಾಗರಬಾವಿ, ಅನ್ನಪೂರ್ಣೇಶ್ವರಿನಗರ, ಸರ್.ಎಂ.ವಿ ಲೇಔಟ್, ಮೂಡಲಪಾಳ್ಯ | 23212181 |
| **(ಕೇಂದ್ರ–2)** | ಮಿಲ್ಲರ್ಸ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು–52 | ಹೈಗ್ರೌಂಡ್ಸ್, (ಹೆಚ್.ಜಿ.ಆರ್), ಕೋಲ್ಸ್ ಪಾರ್ಕ್, ಮಿಲ್ಲರ್ಸ್ ರಸ್ತೆ | 22945191 |
| **(ಉತ್ತರ–2)** | 1ನೇ ಮಹಡಿ, ಪಿನಾಕಿನಿ ಭವನ, ದೊಡ್ಡಬಳ್ಳಾಪುರ ಮುಖ್ಯ ರಸ್ತೆ, ಯಲಹಂಕ ನ್ಯೂ ಟೌನ್, ಬೆಂಗಳೂರು–64 | ಯಲಹಂಕ ಓಲ್ಡ್ ಟೌನ್, ಯಲಹಂಕ ನ್ಯೂಟೌನ್, ಅಟ್ಟೂರು | 9740984163 |
| **(ಈಶಾನ್ಯ–1)** | ಕೊಠಡಿ ಸಂಖ್ಯೆ 115, 1ನೇ ಮಹಡಿ, ಸುವರ್ಣಭವನ, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು. | ಮಲ್ಲೇಶ್ವರಂ–1&2, ಶ್ರೀರಾಮಪುರ, ಯಶವಂತಪುರ–1&2, ಭಾಷ್ಯಂಪಾರ್ಕ್ | 9972438647 |
| **(ಉತ್ತರ ವಿಲೇಜ್ – 1)** | 1ನೇ ಮಹಡಿ, 7ನೇ ಮುಖ್ಯ ರಸ್ತೆ, ಎಂ.ಇ.ಐ ಲೇಔಟ್, ಹೆಸರಘಟ್ಟ ರಸ್ತೆ, ಬೆಂಗಳೂರು–73 | ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು | 9845444068 |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916 ಹಾಗೂ ವಾಟ್ಸಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ ಕೋವಿಡ್–19 ನ ಮರು ತೆರವು ಮಾರ್ಗಸೂಚಿಯನ್ವಯ ಸಭೆಗೆ ಹಾಜರಾಗಲಿರುವ ಸಂದಂರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವಚಿತೆ ಅಧಿಕೃತ ಪ್ರಕಟಣೆ ತಿಳಿಸಿದೆ.

**BWSSB – Water Adalath**

**Bengaluru, September 07, (Karnataka Information) :**

BWSSB water Adalath is held on 09.09.2021 **(East-2)-3, (East-1)-2, (South-2), (South East-4), (West-2), (South West-2), (South East-2), (North West-3), (Central -2), (North -2), (North East-1) and (North Village-1)** sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Service Stations | Phone Number |
|---|---|---|---|
| **(East-2)-3** | 1st Main Road, Kasturinagar, Bengalore-43 | Banaswadi, OMBR, Lingarajapuram, Kasturinagar | 9845444058 |
| **(East-1)-2** | A.Narayanapura Main Road, opp KR Puram Railway Station, Near Patalamma Temple, Hanuman Junction, A.Narayanapura, Bangalore-16. | A.Narayanapura, Doddanakundi, Vignana nagar | 9740984162 |
| **(South-2)** | Near Water Tank, 100 feet Road, BTM 2nd Stage, Bangalore-76 | HSR- 1, Kodichikkanahalli, Bommanahalli | 40977432 |
| **(South East-4)** | 2nd Cross, 17th main, Koramangala 3rd Block, Bangalore-34 | Koramangala-1&2, Bellandur | 9591988970 |
| **(West-2)** | 5th Stage, 1st main, BEML Layout, RR Nagar, Bangalore-98 | Kengeri, Ideal Homes, BEML Layout, RR Nagar | 28611826 |
| **(South West-2)** | Ground Floor, 1st Main, Banashankari 3rd Stage, Banagirinagar, Bangalore-85 | Katriguppe, Hosakerehalli, Devagiri-1, Ittamadu, Banagirinagar | 9845444113 |
| **(South East-2)** | 10th Main Road, 7th Cross, Behind Indiranagar club, HAL 2nd Stage, Bangalore. | Jeevanbheemanagar, HAL 2nd Stage, Indiranagar, Byappanahalli, CV Raman Nagar, Sadanandanagar | 9845444070 |

| | | | |
|---|---|---|---|
| **(North West-3)** | 5th Block, Outer Ring Road, Nagarabhavi, Bangalore | Nagarabhavi, Annapoorneshwarinagar, Sir.MVLayout, Moodalapalya | 23212181 |
| **(Central-2)** | Millers Road, High Grounds, Bangalore-52 | High Grounds(HGR), Coles Park, Millars road | 22945191 |
| **(North -2)** | 1st Floor, Pinakini Bhavan, Doddaballapura Main road, Yalahanka New Town, Bengalore -64 | Yelahanka old town, Yelahanka New town, Attur | 9740984163 |
| **(Nort East-1)** | Room No.115, 1st Floor, Suvarna Bhavan, 18th cross, Margosa Road, Malleshwaram, Bangalore. | Malleshwaram-1&2, Srirampura, Yeshwanthapura -1&2, Bashyam park | 9972438647 |
| **(North Village-1)** | 1st floor, 7th Main, MEI Layout, Hesaraghatta Road, Bangalore-73 | Shettihalli, Abbigere, Chikkasandra, Sidedahalli, Doddabidarakallu | 9845444068 |

For any problems regarding the water supply and all, publics can contact 24x 7 call centre: helpline number: 1916 & whats app no: 8762228888. Public can utilize this adalath facilities to solve the problems regarding water supply. public are requested to follow all precautionary measures according to **Covid-19 Re-open** guidelines while attending the adalath.